ಅಧ್ಯಕ್ಷರು: ಈಗಾಗಲೇ ಸಮಯವಾಗಿದೆ. ದಯವಿಟ್ಟು ಅರ್ಥ ಮಾಡಿಕೊಳ್ಳಿ, ಪ್ರಸ್ತಾಪಿಸಲು ಇನ್ನೂ ಬಹಳಷ್ಟು ವಿಷಯಗಳಿವೆ. ಸಮಯವಿದ್ದಲ್ಲಿ ನಾನು ಪ್ರಸ್ತಾಪಿಸಲು ಅವಕಾಶ ಮಾಡಿಕೊಡುತ್ತೇನೆ.

13. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ

ಅಧ್ಯಕ್ಷರು: ಶಿವಲಿಂಗೇ ಗೌಡರದರು, ಎತ್ತಿನ ಹೊಳೆ ಏತಕ್ಕೆ ಬಂತು.

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೆ, ಉತ್ತರ ಕೊಟ್ಟಿಲ್ಲ.

ಅಧ್ಯಕ್ಷರು: ಉತ್ತರವಿದ್ದರೆ ಹೇಳಿ, ಮಂತ್ರಿಗಳೇ ಒಂದು ಕೆಲಸ ಮಾಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಅಧ್ಯಕ್ಷರೆ, ನಮಗೆ ತೌಡು ಕುಟ್ಟೋ ಉತ್ತರ ಸರ್ಕಾರದಿಂದ ಬೇಡ.

ಅಧ್ಯಕ್ಷರು: ಅದನ್ನೇ ನಾನು ಹೇಳಿದೆ. ಮಂತ್ರಿಗಳೇ ಒಂದು ಕೆಲಸ ಮಾಡಿ. ಕುಮಾರಸ್ವಾಮಿಯವರು ಹೇಳುವುದು ಸರಿ ಇದೆ, ಅವತ್ತು ನಾನು ಸಲಹೆ ಮಾಡಿದ್ದೆ. ಆ ಪ್ರದೇಶದ ಜನರನ್ನು ಒಂದು ಸಾರಿ ಕರೆಯಿಸಿ, ಕುಳಿತು ಚರ್ಚೆ ಮಾಡಿ, ಸಾಧಕ ಬಾಧಕವನ್ನು ಕಂಡುಹಿಡಿಯಿರಿ, ಆ ರೀತಿ ಮಾಡಿದರೆ ಅವರಿಗೂ ಸಮಾಧಾನವಾಗುತ್ತದೆ. ಮುಂದೆ ಏನು ಹೆಜ್ಜೆ ಇಡಬೇಕೆನ್ನುವುದರ ಬಗ್ಗೆ ನಿಮಗೂ ಆಲೋಚನೆ ಬರುತ್ತದೆ.

ಶ್ರೀ ಎಂ.ಬಿ. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ನಿಮ್ಮ ಸಲಹೆಯನ್ನು ಸ್ವಾಗತ ಮಾಡುತ್ತೇನೆ. ನಿನ್ನೆ ಇಲ್ಲಿ ಏನಾಯಿತು ಎಂದರೆ, ಮಾನ್ಯ ಕುಮಾರಸ್ವಾಮಿಯವರು ಏನು ಹೇಳಿದರೆಂದರೆ, ನಿಯಮ–69ಕ್ಕೆ ಏನು ಉತ್ತರ ಕೊಡುತ್ತೀರಿ, ಅದನ್ನು ನಾನು ಬಜೆಟ್ ಮೇಲೆ ಮಾತನಾಡಿದ ಮೇಲೆ ಉತ್ತರ ಕೊಡಿ ಎಂದು ಹೇಳಿದರು. ಅದಕ್ಕೆ ಸುಮ್ಮನಾದೆ. ತಾವು ಹೇಳಿದಂತೆ ಸಭೆ ಮಾಡಿ ಸುದೀರ್ಘವಾಗಿ ಚರ್ಚೆ ಮಾಡಲಾಗುವುದು.